ಇ) ಮೊದಲೂರು, ಮಟರ್ ಹಾಗೂ ಮುದಡಗಾ ಪ್ರೌಢ ಶಾಲೆಗಳು ಹಾಗೂ ಸಲಗರ ಗ್ರಾಮದ ಕಿರಿಯ ಮಹಾವಿದ್ಯಾಲಯದ ಕಟ್ಟಡದ ಕೆಲಸ ಯಾವ ಹಂತದಲ್ಲಿದೆ ಹಾಗೂ ಯಾವಾಗ ಪೂರೈಸಲಾಗುವುದು?

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು): ಅ)

ತಾಲ್ಲೂಕು	ಪ್ರಾಥಮಿಕ ಶಾಲೆ	ಪ್ರೌಢ ಶಾಲೆ
ಅಳಂದ	170	05
ಗುಲ್ಬರ್ಗ	203	08
ಒಟ್ಟು	373	13

ಉಳಿದ ಶಾಲೆಗಳಿಗೆ ವಿವಿಧ ಯೋಜನೆಗಳಾದ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ, ಕಪ್ಪು ಹಲಗೆ ಅಕ್ಷಯ ಯೋಜನೆ, ರಾಜ್ಯ ಯೋಜನಾ ಕಾರ್ಯಕ್ರಮವಾದ ಅಕ್ಷಯ ಯೋಜನೆ ಅಡಿ 12,000 ಶಾಲಾ ಕೊಠಡಿಗಳ ನಿರ್ಮಾಣ, ಇತ್ಯಾದಿಗಳಲ್ಲಿ ಕಟ್ಟಡಗಳ ನಿರ್ಮಾಣ ಕಾರ್ಯ ಕೈಗೊಳ್ಳಲಾಗುತ್ತಿದೆ.

1. ಪೊದಲೂರು ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಇರುವುದಿಲ್ಲ.

2. ಮಟರ ಮತ್ತು ಮುದಡಗಾ ಗ್ರಾಮಗಳ ಪ್ರೌಢ ಶಾಲೆಯ ಕಟ್ಟಡಗಳ ನಿರ್ಮಾಣ ಕಾರ್ಯಕ್ಕಾಗಿ 1995-96ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ಅಳವಡಿಸಿದೆ.

3. ಸಲಗರ ಗ್ರಾಮದ ಸರ್ಕಾರಿ ಕಿರಿಯ ಮಹಾವಿದ್ಯಾಲಯವು ಸರ್ಕಾರಿ ಪ್ರೌಢ ಶಾಲೆಯ ಕಟ್ಟಡದಲ್ಲಿಯೇ ನಡೆಯುತ್ತಿದೆ. ಇದಕ್ಕೆ ಪ್ರತ್ಯೇಕ ಕಟ್ಟಡ ನಿರ್ಮಾಣ ಕಾರ್ಯಕೈಗೊಂಡಿರುವುದಿಲ್ಲ.

ಅಳಂದ ಮತ್ತು ಗುಲ್ಬರ್ಗಾ ತಾಲ್ಲೂಕಿನ ಗ್ರಾಮಾಂತರ ಪ್ರದೇಶದ ಸರ್ಕಾರಿ ಶಾಲೆಗಳು

307 - ಶ್ರೀ ರೇವು ನಾಯಕ್ ಬೆಲಮಗಿ (ಕಮಲಾಪುರ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಳಂದ ಮತ್ತು ಗುಲ್ಬರ್ಗಾ ತಾಲ್ಲೂಕಾದ ಗ್ರಾಮಾಂತರ ಪ್ರದೇಶಗಳಲ್ಲಿ ಇರುವ ಸರಕಾರಿ ಪ್ರಾಥಮಿಕ, ಪ್ರೌಢ ಹಾಗೂ ಕಿರಿಯ ಕಾಲೇಜುಗಳ ಸಂಖ್ಯೆ ಎಷ್ಟು ಹಾಗೂ ಇವುಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರ ಸಂಖ್ಯೆ ಎಷ್ಟು?

ಆ) ಪ್ರಾಥಮಿಕ ಪ್ರೌಢ ಮತ್ತು ಕಿರಿಯ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ಶಿಕ್ಷಕರ ಸಂಖ್ಯೆ ಎಷ್ಟು? (ಪ್ರತ್ಯೇಕ ವಿವರ ನೀಡುವುದು)

ಇ) ಈ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಜಿ. ಗೋವಿಂದೇಗೌಡ : (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು):

		ಸಂಖ್ಯೆ	ಶಿಕ್ಷಕರ ಸಂಖ್ಯೆ
	ಅಳಂದ ತಾಲ್ಲೂಕು		
1.	ಸರ್ಕಾರಿ ಪ್ರಾಥಮಿಕ ಶಾಲೆ	162	606
2.	ಸರ್ಕಾರಿ ಪ್ರೌಢ ಶಾಲೆ	15	131

3.	ಸರ್ಕಾರಿ ಕಿರಿಯ ಕಾಲೇಜು	12	54
	ಗುಲ್ಬರ್ಗಾ ತಾಲ್ಲೂಕು		
1.	ಸರ್ಕಾರಿ ಪ್ರಾಥಮಿಕ ಶಾಲೆ	154	59
2.	ಸರ್ಕಾರಿ ಪ್ರೌಢ ಶಾಲೆ	9	74
3.	ಸರ್ಕಾರಿ ಕಿರಿಯ ಕಾಲೇಜು	4	18

ಆಳಂದ ತಾಲ್ಲೂಕು	ಖಾಲಿ ಇರುವ ಶಿಕ್ಷಕರ ಸಂಖ್ಯೆ
ಸರ್ಕಾರಿ ಪ್ರಾಥಮಿಕ ಶಾಲೆ	45
ಸರ್ಕಾರಿ ಪ್ರೌಢಶಾಲೆ	70
ಸರ್ಕಾರಿ ಕಿರಿಯ ಕಾಲೇಜು	55
ಗುಲ್ಬರ್ಗಾ ತಾಲ್ಲೂಕು	
ಸರ್ಕಾರಿ ಪ್ರಾಥಮಿಕ ಶಾಲೆ	35
ಸರ್ಕಾರಿ ಪ್ರೌಢಶಾಲೆ	4
ಸರ್ಕಾರಿ ಕಿರಿಯ ಕಾಲೇಜು	11

ಅದಷ್ಟು ಬೇಗನೆ ಖಾಲಿಯಿರುವ ಹುದ್ದೆಗಳನ್ನು ತುಂಬಲಾಗುವುದು.

ಧಾರವಾಡ ಜಿಲ್ಲೆಯಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳು

95 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕು.ಕ. ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ – ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯಲ್ಲಿ ವೈದ್ಯರಿಲ್ಲದೆ ಆಸ್ಪತ್ರೆಗಳ ಸಂಖ್ಯೆ ಎಷ್ಟು ಎಷ್ಟು ವರ್ಷಗಳಿಂದ ಈ ಹುದ್ದೆಗಳು ಖಾಲಿ ವರ್ಷಗಳಿಂದ ಈ ಹುದ್ದೆಗಳು ಖಾಲಿ ಇದೆ. (ತಾಲ್ಲೂಕುವಾರು ವಿವರ ನೀಡುವುದು)

ಆ) ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರವು ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು):

ದಿನಾಂಕ 15-2-95ರಂದು ಜಿಲ್ಲಾಧಿಕಾರಿ ಧಾರವಾಡ ಇವರಿಂದ ಸ್ವೀಕೃತವಾಗಿರುವ ವರದಿಯ ಮೇರೆಗೆ 13 ಪ್ರಾಥಮಿಕ ಆರೋಗ್ಯ ಕೇಂದ್ರ ಕೇಂದ್ರ ಘಟಕ ಇಲ್ಲಿಗೆ ದಿನಾಂಕ 21-3-95ರಂದು ಗುತ್ತಿಗೆ ಆಧಾರದ ವೈದ್ಯರುಗಳನ್ನು ನೇಮಕ ಮಾಡಲಾಗಿದೆ. ಅವಶ್ಯಕ ವೆರಿಫಿಕೇಷನ್ ಆದ ಕೂಡಲೇ ಸದರಿ ವೈದ್ಯರುಗಳು ನೇಮಕಾತಿ ಆಗಿರುವ ಸ್ಥಳದಲ್ಲಿ ವರದಿ ಮಾಡಿಕೊಳ್ಳುವರು. ಇನ್ನೂ ಹುದ್ದೆ ಖಾಲಿ ಉಳಿದ ಬಗ್ಗೆ ಜಿಲ್ಲಾಧಿಕಾರಿಯವರಿಂದ ವರದಿ ಬಂದ ತಕ್ಷಣ ಅವಶ್ಯವಿದ್ದಲ್ಲಿ ಇನ್ನೊಂದು ತಂಡದಲ್ಲಿ ಗುತ್ತಿಗೆ ಆಧಾರದಲ್ಲಿ ವೈದ್ಯರನ್ನು ನೇಮಿಸಲಾಗುವುದು.

ವಿವಿಧ ಆಸ್ಪತ್ರೆಗಳಿಗೆ ಔಷಧಿ ಹಾಗೂ ವೈದ್ಯರು

96 - ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ದರ್ಜೆಯ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಆ) ಯಾವ ಯಾವ ದರ್ಜೆಯ ಆಸ್ಪತ್ರೆಗಳಿಗೆ ಪ್ರತಿವರ್ಷ ಪೂರೈಸುವ ಔಷಧದ ಬೆಲೆ ಎಷ್ಟು?